(ಗೊಂದಲ)

**ಅಧ್ಯಕ್ಷರು :** ಮಾನ್ಯ ನರೇಂದ್ರ ಬಾಬುರವರು ನಿಲುವಳಿ ಸೂಚನೆ ತೆಗೆದುಕೊಳ್ಳುತ್ತಾರೆ. ನಿಲುವಳಿ ಸೂಚನೆಯನ್ನು ಅವರು ತಂದಿದ್ದಾರೆ. ದಯವಿಟ್ಟು ನೀವುಗಳು ಕುಳಿತುಕೊಳ್ಳಿ. ನಿಲುವಳಿ ಸೂಚನೆಗೆ ಕರೆದಿದ್ದೇನೆ. ಒಂದು ನಿಮಿಷ ನೀವುಗಳು ಕುಳಿತುಕೊಳ್ಳಿ. ಆಮೇಲೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ.

**3. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ :**

**ವಿಷಯ : ಕರ್ನಾಟಕ ಗೃಹ ಮಂಡಳಿಯ ಕಾರ್ಯ ವೈಖರಿ ಬಗ್ಗೆ.**

**ಶ್ರೀ ನೆ.ಲ.ನರೇಂದ್ರಬಾಬು (ಮಹಾಲಕ್ಷ್ಮಿ ಬಡಾವಣೆ) :** ಮಾನ್ಯ ಸಭಾಧ್ಯಕ್ಷರೆ, ನಿಲುವಳಿ ಸೂಚನೆಯನ್ನು ಸರ್ಕಾರದ ಮುಂದೆ ನಾನು ಈಗಾಗಲೇ ಮಂಡಿಸಿದ್ದೇನೆ. ಕರ್ನಾಟಕ ಗೃಹ ಮಂಡಳಿಯಲ್ಲಿ ಹಲವಾರು ವರ್ಷಗಳಿಂದ ಕಟ್ಟಿರುವ ಕೊಟ್ಯಾಂತರ ರೂಪಾಯಿ ಬೆಲೆ ಬಾಳುವ ನಿವೇಶನಗಳು ಮತ್ತು ಮನೆಗಳಿವೆ. 1962 ರಲ್ಲಿ ಆರಂಭಗೊಂಡಿರುವ ಹೌಸಿಂಗ್ ಬೋರ್ಡ್ ಇಂದು ಸಂಪೂರ್ಣ ನಿಷ್ಕ್ರೀಯವಾಗಿದೆ. ಈ ಹಿಂದೆ ತಿಪ್ಪೇಗೌಡರು ಎಂಬ ಸಚಿವರಿದ್ದರು. ಬಹುಶಃ, ನನಗೆ ನೆನಪಿರುವಂತೆ ಸದಾಶಿವನಗರದಿಂದಿಡಿದು ಗ್ರಾಮಾಂತರ ಪ್ರದೇಶದವರೆಗೂ ಮನೆಗಳನ್ನು ಹೌಸಿಂಗ್ ಬೋರ್ಡ್ ನಿರ್ಮಿಸಿತ್ತು. ಆದರೆ, ಇವತ್ತು ಹೌಸಿಂಗ್ ಬೋರ್ಡ್ ಎನ್ನುವುದು ಯಾವುದೋ construction corporation ತರಹ ಕೆಲಸ ಮಾಡುತ್ತಿದೆ, Land Army Corporation ತರಹ ಕಾರ್ಯ ನಿರ್ವಹಿಸುತ್ತಿದೆಯೇ ಹೊರತು ನಿಜವಾಗಿಯೂ ಹೌಸಿಂಗ್ ಬೋರ್ಡ್ ಏನು ಮಾಡಬೇಕಾಗಿತ್ತು ಎಂದರೆ, ಎಲ್ಲರಿಗೂ ನೀರು ಮತ್ತು ಸೂರು ಎಂದು ಏನು ಹೇಳುತ್ತೇವೆ, ಅದನ್ನು ಕೊಡಬಹುದಾಗಿತ್ತು. ಆದರೆ, ಅದರಲ್ಲಿ ಸಂಪೂರ್ಣ ವಿಫಲವಾಗಿರುವುದು ನೋವು ತರುವ ಸಂಗತಿಯಾಗಿದೆ.

**ಅಧ್ಯಕ್ಷರು :** ಈ ವಿಷಯ ನಿಲುವಳಿ ಸೂಚನೆಯಡಿ ಹೇಗೆ ಬರುತ್ತದೆಂಬುದನ್ನು ಹೇಳಬೇಕು.

**ಶ್ರೀ ನೆ.ಲ.ನರೇಂದ್ರಬಾಬು :** ಇವತ್ತು ಗೃಹ ಮಂಡಳಿ ರಚನೆಯಾಗಿರುವ ಉದ್ದೇಶ ಈಡೇರುತ್ತಿಲ್ಲ. ವಸತಿಹೀನರಿಗೆ ವಸತಿ ಕೊಡುವುದಕ್ಕಾಗುತ್ತಿಲ್ಲ, ನಿವೇಶನ ಇಲ್ಲದವರಿಗೆ ನಿವೇಶನ ಕೊಡುವ ಕೆಲಸವಾಗುತ್ತಿಲ್ಲ.

ಗುಡಿಸಲುರಹಿತ ರಾಜ್ಯ ಮಾಡುತ್ತೇವೆಂದು ಸನ್ಮಾನ್ಯ ಮುಖ್ಯಮಂತ್ರಿ ಗಳಾದಿಯಾಗಿ ಎಲ್ಲರೂ ಇವತ್ತು ಘೋಷಿಸುತ್ತಿದ್ದಾರೆ. ಗುಡಿಸಲುರಹಿತ ರಾಜ್ಯವನ್ನಾಗಿ ಮಾಡಬೇಕಾದರೆ, ಏನು ಯೋಜನೆಗಳಿವೆ, ಲಕ್ಷಾಂತರ ಮನೆಗಳನ್ನು ಕಟ್ಟುತ್ತೇವೆಂದು ಬರೀ ಘೋಷಣೆಗಳಾಗಿವೆಯೇ ವಿನಾ ಏನೂ ಕೆಲಸವಾಗುತ್ತಿಲ್ಲ. ನನಗೆ ಬಂದಿರುವ ಮಾಹಿತಿ ರೀತ್ಯಾ....

**ಅಧ್ಯಕ್ಷರು** : ಇದು ನಿಲುವಳಿ ಸೂಚನೆಯಡಿ ಹೇಗೆ ಬರುತ್ತದೆಂಬುದನ್ನು ಮೊದಲು ಹೇಳಬೇಕಾಗುತ್ತದೆ. ತಾವು ಡೀಟೆಲ್ಸ್‌ಗೆ ಹೋಗಬೇಡಿ. ಅಷ್ಟಕ್ಕೆ ಮಾತ್ರ ಸೀಮಿತಗೊಳಿಸಬೇಕು.

**ಶ್ರೀ ಎಸ್. ಸುರೇಶ್‌ಕುಮಾರ್** : ನರೇಂದ್ರಬಾಬುರವರೆ, ಇದು ನಿಲುವಳಿ ಸೂಚನೆಯಡಿ ಬರುವುದಿಲ್ಲ. ಬೇರೆ ರೂಪದಲ್ಲಿ ತಾವು ಚರ್ಚೆಗೆ ತನ್ನಿ.

**ಶ್ರೀ ಎಸ್. ನರೇಂದ್ರಬಾಬು** : ಮಾನ್ಯ ಸಭಾಧ್ಯಕ್ಷರೆ, ಇವತ್ತು ಹಾಸನದಲ್ಲಿ.....

**ಶ್ರೀ ಎಸ್. ಸುರೇಶ್ ಕುಮಾರ್** : ಇದು ನಿಯಮ 69ರಡಿಯಲ್ಲೂ ಬರುವುದಿಲ್ಲ. ಬೇರೆ ರೂಪದಲಿ ತನ್ನಿ. ಏಕೆಂದರೆ, Rule 69 is also very important. Any Member desirous of raising discussion on a matter of urgent public importance..... ಅರ್ಧ ಗಂಟೆ ಚರ್ಚೆಗೆ ಅವಕಾಶ ಕಲ್ಪಿಸಿಕೊಡಿ, ತೆಗೆದುಕೊಳ್ಳೋಣ. Not under Rule 69:

**ಅಧ್ಯಕ್ಷರು** : ಇದು ನಿಲುವಳಿ ಸೂಚನೆಯಡಿ ಬರುವುದಿಲ್ಲ. ಅರ್ಧ ಗಂಟೆ ಚರ್ಚೆಗೆ ಅವಕಾಶ ಕಲ್ಪಿಸಿಕೊಡುತ್ತೇನೆ.

**ಶ್ರೀ ಎಸ್. ಸುರೇಶ್‌ಕುಮಾರ್** : ಈ ವಿಷಯ. ನಿಯಮ 60 ರಡಿಯೂ ಬರುವುದಿಲ್ಲ, 69ರಡಿಯೂ ಬರುವುದಿಲ್ಲ. ಬೇರೆ ರೂಪದಲ್ಲಿ ತನ್ನಿ.

**ಶ್ರೀ ನ.ಲ.ನರೇಂದ್ರಬಾಬು** : ನಾನು ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ. ಇವತ್ತು ಹೌಸಿಂಗ್ ಬೋರ್ಡ್‌ನಲ್ಲಿ, ಹಾಸನದಲ್ಲಿ.....

**ಶ್ರೀ ಎಸ್.ಸುರೇಶ್‌ಕುಮಾರ್** : ನರೇಂದ್ರಬಾಬುರವರೆ, ನಾನು ನಿಮ್ಮ ಇಶ್ಯೂ ಬಗ್ಗೆ ಮಾತನಾಡುತ್ತಿಲ್ಲ. ಇಶ್ಯೂ ಬಹಳ ಮಹತ್ವದ್ದಾಗಿದೆ. ಆದರೆ, ಇದು ನಿಯಮ 60ರಡಿಯಲ್ಲಾಗಲಿ, 69ರಡಿಯಲ್ಲಾಗಲಿ ಬರುವುದಿಲ್ಲ. ಬೇರೆ ರೂಪದಲ್ಲಿ ತನ್ನಿ, ಚರ್ಚಿಸೋಣ.

**ಶ್ರೀ ನೆ.ಲ.ನರೇಂದ್ರಬಾಬು** : ಬಹಳಷ್ಟು ಜನರಿಗೆ ಮಾತು ಕೊಟ್ಟಿರುವಂತೆ, ಸೂರು ಎನ್ನುವುದು ಮಹತ್ವದಲ್ಲವೇ? ಇವತ್ತು ಹಾಸನದಲ್ಲಿ ಹೌಸಿಂಗ್ ಬೋರ್ಡ್ ಫಲವತ್ತಾದ ಭೂಮಿಯನ್ನು ವಶಪಡಿಸಿಕೊಂಡಿದೆ ಎಂದು ಅಲ್ಲಿನ ರೈತರು ಡಿ.ಸಿ. ಕಚೇರಿ ಮುಂದೆ ಧರಣಿ ಕುಳಿತಿದ್ದಾರೆ. ರೈತರು ತಮ್ಮ ಜಮೀನನ್ನು ಎಲ್ಲಿ ಕೊಡಲು ಮುಂದೆ ಬರುತ್ತಿದ್ದರೋ, ಅಲ್ಲಿ ಸರ್ಕಾರ ಭೂಮಿಯನ್ನು ತೆಗೆದುಕೊಳ್ಳುತ್ತಿಲ್ಲ.

**ಶ್ರೀ ಹೆಚ್.ಎಸ್.ಪ್ರಕಾಶ್** : ರೈತರು ಅಲ್ಲಿ ಸ್ಟ್ರೈಕ್ ಮಾಡಲು ಶುರು ಮಾಡಿ 12 ದಿವಸಗಳಾದವು.

**ಅಧ್ಯಕ್ಷರು** : ಈ ವಿಷಯ ನಿಯಮ 69ರಡಿ ಬರುವುದಿಲ್ಲ. ಬೇರೆ ಯಾವುದಾದರೂ ರೂಪದಲ್ಲಿ, ಗಮನ ಸೆಳೆಯುವ ಸೂಚನೆ ರೂಪದಲ್ಲಿ ತನ್ನಿ.

**ಶ್ರೀ ಟಿ.ಬಿ.ಜಯಚಂದ್ರ** : ಅಧ್ಯಕ್ಷರೆ, ಇದರ ಬಗ್ಗೆ half an hour discussion ಗೆ ಅವಕಾಶ ಕಲ್ಪಿಸಿಕೊಡಿ.

**ಶ್ರೀ ಎಸ್. ಸುರೇಶ್‌ಕುಮಾರ್** : ಜಯಚಂದ್ರರವರೆ, half an hour discussion ಯಾವಾಗ ಬರುತ್ತದೆಂದರೆ, raising out of question, through question hour, ಬೇರೆ ಸ್ವರೂಪದಲ್ಲಿ ಅವರು ತರಲಿ.

**ಶ್ರೀ ಟಿ.ಬಿ.ಜಯಚಂದ್ರ** : ಹೋಗಲಿ, ಗಮನ ಸೆಳೆಯುವ ಸೂಚನೆಯಡಿ ಅವಕಾಶ ಕಲ್ಪಿಸಿಕೊಡಿ.

**ಶ್ರೀ ಎಸ್. ಸುರೇಶ್ ಕುಮಾರ್** : ಆಗಬಹುದು. ಗಮನ ಸೆಳೆಯುವ ಸೂಚನೆಯಡಿ ಅವಕಾಶ ಕಲ್ಪಿಸಿಕೊಡಿ.

**ಅಧ್ಯಕ್ಷರು** : ಗಮನ ಸೆಳೆಯುವ ಸೂಚನೆಯಡಿ ನಾಳೆ ತೆಗೆದುಕೊಳ್ಳೋಣ.

**ಶ್ರೀ ಎಸ್. ಸುರೇಶ್‌ಕುಮಾರ್** : ನಮ್ಮಲ್ಲಿ ಒಂದು ಪದ್ಧತಿ ಹೇಗಿದೆಯೆಂದರೆ, ನಿಯಮ 60 ರಡಿ ಹಾಕುವುದು, ಕನ್ವರ್ಟ್ ಮಾಡುವುದು. ಆದುದರಿಂದ, ಇದು ನಿಯಮ 60 ರಡಿಯೂ ಬರುವುದಿಲ್ಲ, 69 ರಡಿಯೂ ಬರವುದಿಲ್ಲ. ಗಮನ ಸೆಳೆಯುವ ಸೂಚನೆಯಾಗಿ ತನ್ನಿ, ನೋಡೋಣ.

**ಅಧ್ಯಕ್ಷರು** : ಈಗ ನಾನು ನಿಲುವಳಿ ಸೂಚನೆಯನ್ನು ತಿರಸ್ಕರಿಸಿದ್ದೇನೆ. ಹಾಗೆಯೇ, ಇದನ್ನು ಗಮನ ಸೆಳೆಯುವ ಸೂಚನೆಯಾಗಿ ನಾಳೆ ಚರ್ಚೆಗೆ ಅವಕಾಶ ಕಲ್ಪಿಸಿಕೊಡುತ್ತೇನೆ.